† ಶ್ರೀ ಎಚ್. ಜಿ. ನರಸಿಂಹೇಗಾಡ.—ದಯವಿಟ್ಟು ನಾನು ಹೇಳುವುದನ್ನು ಕೇಳಬೇಕು ಹೀಗೆ ಸ್ಪೀಕರ್ ಅವರೇ ಮಾಡಿದ ರೂಲ್‌ಗೆ ವಿರೋಧವಾಗಿ ರೂಲಿಂಗ್ ಆಗುವುದಾದರೆ ಏನು ಮಾಡುವುದು ? ಸರಿ ಹಾಗಾದರೆ ನಿನ್ನೆಯ ದಿವಸವೇ ನಾವು closure motion ತಂದು ಬಿಡುತ್ತಿದ್ದೆವು ಹಾಗೆ ಮಾಡದೆ ನಿನ್ನೆಯ ದಿವಸ ನಾವು time extend ಮಾಡಬೇಕು ಎಂದು ಕೇಳಿಕೊಂಡೆವು ನನಗೆ ಮಾತನಾಡಲು ಚಾನ್ಸ್ ಕೊಡುತ್ತೇನೆಂದು ಹೇಳಿದರು. ಆದ್ದರಿಂದ ನನಗೆ ಇಂದು ಮಾತನಾಡಲು ಚಾನ್ಸ್ ಕೊಡಲೇಬೇಕು. ನಾನು ಮಾತನಾಡದೇ ಇರುವುದು ಸಾಧ್ಯವಿಲ್ಲ. ಈ ರೀತಿ ನೀವು ಮಾಡುವುದಾದರೆ ಪ್ರತಿದಿವಸ question hour ಆದ ಮೇಲೆ ಎಲ್ಲಾ ಡಿಮ್ಯಾಂಡುಗಳನ್ನು ಓಟಿಗೆ ಹಾಕಿ ಬಿಡಿ. ನಿಮಗೆ support ಸಿಕ್ಕೇ ಸಿಗುತ್ತದೆ. ಡಿಮ್ಯಾಂಡ್ ಪಾಸ್ ಆಗುತ್ತದೆ. ಹೀಗೆ ಆಗುವುದಾದರೆ ನಾವು ವಿರೋಧಿ ಪಕ್ಷದ ಸದಸ್ಯರು ಇಲ್ಲಿಗೆ ಏತಕ್ಕೆ ಬರಬೇಕು ನಿನ್ನೆಯ ದಿವಸ ನಮ್ಮ ಪಕ್ಷದ ಪರವಾಗಿ ಹೇಳಿ time extend ಮಾಡಬೇಕು, ಚರ್ಚೆ ಮುಂದುವರಿಸಬೇಕು, ಅನೇಕರು ಇನ್ನೂ ಮಾತನಾಡುವವರು ಇದ್ದಾರೆ ಎಂದು ಕೇಳಿಕೊಂಡುದ್ದಕ್ಕೆ ನಿನ್ನೆಯ ದಿವಸ ಡೆಪ್ಯೂಟಿ ಸ್ಪೀಕರ್ ಅವರು ರೂಲಿಂಗ್ ಕೊಟ್ಟಿದ್ದಾರೆ. ಅದಕ್ಕೆ ಅನುಸಾರವಾಗಿ ಮಾಡಬೇಕು.

ಅಧ್ಯಕ್ಷರು.—ಅದು ಆಗುವುದಿಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.—Important subject discussion ಮಾಡುವುದು ಕೊಡದೇ ಇದ್ದರೆ ಏನು ಪ್ರಯೋಜನ ? Without discussion ಆಗುವದಾದರೆ ಯಾವುದಕ್ಕೆ ಮಿನಿಸ್ಟರರು reply ಕೊಡುತ್ತಾರೆ ? ಅವರು ಉತ್ತರ ಹೇಳುವುದು ಏನಿದೆ ? ಅವರು ಹೇಳುವುದೆಲ್ಲಾ ಪುಸ್ತಕದಲ್ಲಿ ಇರುತ್ತದೆ.

Mr. SPEAKER.—He should carry the House with him. If that is so, I have no objection.

ಶ್ರೀ ಎಚ್. ಜಿ. ನರಸಿಂಹೇಗೌಡ.—ನಿಮಗೆ ನಾವು ಭಾಷಣ ಮಾಡಿ ಹೇಳುವುದು ಬೇಕಾಗಿಲ್ಲವಾದರೆ ಏತಕ್ಕೆ ಸಭೆಯಲ್ಲಿ ಮಂತ್ರಿಗಳು ಉತ್ತರ ಹೇಳಬೇಕಾಗುತ್ತದೆ ?

Mr. SPEAKER.—Things are going to a head. Unless my orders are obeyed in the House, I am going to adjourn the House.

ಶ್ರೀ ಎಚ್. ಜಿ. ನರಸಿಂಹೇಗೌಡ.—ದಯವಿಟ್ಟು ನಾನು ಹೇಳುವ ಮಾತನ್ನು ಕೇಳಿಕೊಳ್ಳಬೇಕು. ಕಾಂಗ್ರೆಸ್ ಪಕ್ಷದ ಸದಸ್ಯರೇ ಆಗಲಿ ವಿರೋಧಿ ಪಕ್ಷದ ಸದಸ್ಯರೇ ಆಗಲಿ ಇನ್ನೂ discuss ಮಾಡಬೇಕಾಗಿರುವದರಿಂದ ಕೊಂಚ ಕಾಲ extend ಮಾಡಬೇಕು.

Mr. SPEAKER.—No no, I am not going to extend the time because it is the sense of the House.

ಶ್ರೀ ಎಚ್. ಜಿ. ನರಸಿಂಹೇಗಾಡ.—ನಮಗೆ ಮಾತನಾಡುವುದಕ್ಕೆ ಚಾನ್ಸ್ ದೊರೆಯದೇ ಹೋದರೆ ನಾವು ಇಲ್ಲಿ ಏತಕ್ಕೆ ಬರುವುದು ? ಇದನ್ನು ಬಿಡಿ ಹೀಗೆ ಆದರೆ ಸರಿ! ಸರಿ! ಪರವಾ ಇಲ್ಲ. ಇನ್ನು ಮುಂದೆ ಪ್ರತಿಯೊಂದು subject ಮೇಲೆ closure motion move ಮಾಡುತ್ತೇವೆ ಇದೇನು ? ನಿಮ್ಮ ಮನಸ್ಸಿಗೆ ಬಂದ ಹಾಗೆ ನಿಮ್ಮ ಮನೆಯ ವ್ಯವಹಾರ ನಡೆಸುವ ಹಾಗೆ ಬೇಕಾದ ಹಾಗೆ ನೀವು ನಡೆಸುವುದಾದರೆ ನಾವು ಇಲ್ಲಿಗೆ ಬರುವುದು ಏತಕ್ಕೆ ? ಇಲ್ಲಿ ಇರುವುದು ಏತಕ್ಕೆ ? ನಾನು ಸಭೆಯಿಂದ ಹೊರಟು ಹೋಗುತ್ತೇನೆ.

(ಸದಸ್ಯರು ಸಭೆಯಿಂದ ಹೊರಗೆ ಹೋದರು)

Mr. SPEAKER.—He is not the only Member. I asked the Hon'ble Member to sit down. I would call on the Hon'ble Minister to reply.

(Sri NARASIMHE GOWDA *then with drew from the House.*)